**O.S. 32-21** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ P H K, ವಕೀಲರಿಂದಃ**

8. ಒಂದನೇ ಪ್ರತಿವಾದಿ ಕುಟುಂಬಕ್ಕಿಂತ ನಮ್ಮ ಕುಟುಂಬ ಆರ್ಥಿಕವಾಗಿ ಸ್ಥಿತಿವಂತವಾಗಿದೆ ಅಂದರೆ ಸರಿ. ಒಂದನೇ ಪ್ರತಿವಾದಿಯ ಆರ್ಥಿಕ ಪರಿಸ್ಥಿತಿಯ ತೊಂದರೆಯಿಂದಾಗಿ ಆತನಿಗೆ ಬಿ ಪಿ ಹಾಗೂ ಶುಗರ್ ಹೆಚ್ಚಾಗಿದೆ ಅಂದರೆ ಗೊತ್ತಿಲ್ಲ. ದಾವೆ ಸಲ್ಲಿಸುವದಕ್ಕಿಂತ ಪೂರ್ವದಲ್ಲಿ ಒಂದನೇ ಪ್ರತಿವಾದಿಗೆ ತೊಂದರೆಯಾದಾಗ ನಮ್ಮ ಬಳಿ ಬಂದು ಹೇಳುತ್ತಿದ್ದನು ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿಯ ಕುಟುಂಬದಲ್ಲಿ ಆತನ ಹೆಂಡತಿ ಹಾಗೂ ಒಬ್ಬ ಮಗ 3 ಜನ ಇದ್ದಾರೆ ಅಂದರೆ ಸರಿ. 3 ಜನ ಇರುವುದರಿಂದ ಅವರ ಕುಟುಂಬದಲ್ಲಿ ಖರ್ಚು-ವೆಚ್ಚ ಕಡಿಮೆ ಇದೆ ಅಂದರೆ ಸರಿ. ನಾನು, ಪ್ರತಿವಾದಿ -2 ಹಾಗೂ 3 ನನ್ನ ತಂಗಿಯರು ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಹೆಚ್ಚಿದ್ದು, ಖರ್ಚಿನ ಪ್ರಮಾಣ ಹೆಚ್ಚಿದೆ ಅಂದರೆ ಸರಿ. ಒಂದನೇ ಪ್ರತಿವಾದಿ ಕುಟುಂಬದ ಆಸ್ತಿಗಳನ್ನು ಮಾರಾಟ ಮಾಡಿ, ಸದರಿ ಹಣವನ್ನು ನಾನೇ ತೆಗೆದುಕೊಂಡಿದ್ದು, ಅವರಿಗೆ ತೊಂದರೆಯಾಗುವ ಕಾಲಕ್ಕೆ ಒಂದನೇ ಪ್ರತಿವಾದಿ ನಾನು ಹಣ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಮಾರಾಟ ಮಾಡಿದ ಹಣವನ್ನು ಒಂದನೇ ಪ್ರತಿವಾದಿ ನಮ್ಮ ಕುಟುಂಬಕ್ಕೆ ಕೊಟ್ಟಿದ್ದಾನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಮಾರಾಟ ಮಾಡಿದ ಹಣವನ್ನು ಒಂದನೇ ಪ್ರತಿವಾದಿ ನಮ್ಮ ಕುಟುಂಬಕ್ಕೆ ಖರ್ಚು-ವೆಚ್ಚದ ಸಲುವಾಗಿ ಕೊಟ್ಟಿದ್ದರಿಂದ, ಆತನ ಕುಟುಂಬಕ್ಕೆ ಹಣಕಾಸಿನ ತೊಂದರೆಯಾಗಿದೆ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ತನ್ನ ಕುಟುಂಬ ನಡೆಸಲು ತೊಂದರೆಯಲ್ಲಿದ್ದು, ಆ ವಿಷಯ ನನಗೆ ಗೊತ್ತಿದೆ ಅಂದರೆ ಸರಿಯಲ್ಲ.

9. 1991 ರಿಂದ ದಾವಾ ಆಸ್ತಿಯ ಮಾಲಿಕ ಒಂದನೇ ಪ್ರತಿವಾದಿ ಅಂದರೆ ಸರಿಯಲ್ಲ. 1991 ರಿಂದ ಒಂದನೇ ಪ್ರತಿವಾದಿ ಮಾಲ್ಕಿ ಹಾಗೂ ಕಬ್ಜೆದಾರನಾಗಿ ಬಂದ ವಿಷಯ ನನಗೆ ಗೊತ್ತಿದೆ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ದಾವಾ ಆಸ್ತಿಗಳನ್ನು ನಮ್ಮ ಸಲುವಾಗಿ ಮಾರಾಟ ಮಾಡಿ ಬಂದ ಹಣವನ್ನು ನಮಗೆ ಕೊಟ್ಟಿದ್ದರಿಂದ ಖರೀದಿ ಪತ್ರ ನಮಗೆ ಬಂಧನಕಾರಿ ಆಗುತ್ತವೆ ಅಂದರೆ ಸರಿಯಲ್ಲ.

10. ಉತಾರದಲ್ಲಿ ತೋರಿಸಿದ ಕೆಲವು ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದ ಕಾರಣ, ದಾವೆ ಊರ್ಜಿತವಲ್ಲ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿಗೆ ತೊಂದರೆ ಕೊಡಲು ವ್ಯಾಜ್ಯ ಕಾರಣ ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಹೇಳಿರುವಂತೆ ನಾವು ಹಾಗೂ ಪ್ರತಿವಾದಿ 1 ರಿಂದ 3 ರವರು ಜಂಟಿ ಕುಟುಂಬದ ಸದಸ್ಯರು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಬಿಟ್ಟುಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ಹೆಸರಿನಲ್ಲಿ ಕಾನೂನುಬದ್ಧವಾಗಿ ಮುಟೇಶನ್ ಆಗಿದೆ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ಮಾರಾಟ ಮಾಡಿದ್ದು, ಕ್ರಮಸಂಖ್ಯೆ 5 ರಿಂದ 24 ಹಾಗೂ ಬಿ-ಶೆಡ್ಯೂಲ್ ಆಸ್ತಿಗಳು ಪ್ರತಿವಾದಿ 4 ರಿಂದ 18 ರವರೆಗೆ ಕಾನೂನು ಬದ್ಧವಾಗಿದೆ ಅಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಕೇಳಿರುವಂತೆ ಯಾವುದೇ ಪರಿಹಾರ ಪಡೆಯಲು ಅರ್ಹಳು ಅಲ್ಲ ಅಂದರೆ ಸರಿಯಲ್ಲ. ನಾನು 2020 ರಲ್ಲಿ ಒಂದನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಪಾಲು ಕೇಳಿದ್ದೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹೆದ್ದಾರಿ ಸಂಬಂಧ ಬಂದ ಪರಿಹಾರದ ಹಣವನ್ನು ನಮಗೆ ಖರ್ಚು ಮಾಡಿದ ಸಾಲದ ಸಲುವಾಗಿ ಖರ್ಚಾಗಿದೆ ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿಗೆ ಮಾರಾಟ ಮಾಡಿದ ಹಣವನ್ನು ನಾನೇ ತೆಗೆದುಕೊಂಡು ಆತನಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆ ಯಾವ ವರ್ಷದಲ್ಲಿ ಮರಣ ಹೊಂದಿದ್ದಾರೆಂದು ಗೊತ್ತಿಲ್ಲ. ನಮ್ಮ ತಂದೆ ಮರಣ ಹೊಂದಿ ಸುಮಾರು 35 ವರ್ಷಗಳಾಗಿದ್ದು ಒಂದನೇ ಪ್ರತಿವಾದಿ ಆ ಕಾಲದಿಂದಲೂ ಮಾಲಿಕರಾಗಿರುವುದರಿಂದಲೂ ಮತ್ತು ನಾವು ಹಕ್ಕು ಬಿಟ್ಟುಕೊಟ್ಟಿದ್ದರಿಂದ ದಾವೆ ಕಾಲಮಿತಿ ಪರಿಮಿತಿ ಅವಧಿ ಮೀರಿದ್ದು ಅಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ದಾವಾ ಆಸ್ತಿ ಮಾರಾಟ ಮಾಡಿದ ವಿಷಯ, ದಾವಾ ಸಲ್ಲಿಸುವ ಪೂರ್ವದಲ್ಲಿ ಗೊತ್ತಿತ್ತು ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತ-ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಾನು ಈಗಾಗಲೇ ಹಣ ಪಡೆದಿದ್ದರಿಂದ ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಈಗ ಉಳಿದ ದಾವಾ ಆಸ್ತಿಗೆ ಒಂದನೇ ಪ್ರತಿವಾದಿ ಸಂಪೂರ್ಣ ಮಾಲಿಕ ಅಂದರೆ ಸರಿಯಲ್ಲ.

**O.S. 32-21** **PW : 1**

1 ನೇ ಪ್ರತಿವಾದಿ ಖರೀದಿಗೆ ಕೊಟ್ಟ ದಾವಾ ಆಸ್ತಿಗಳ ಮಾಲಿಕನಿರುವುದರಿಂದ ಖರೀದಿ ಪತ್ರಗಳನ್ನು ಪ್ರಶ್ನೆ ಮಾಡುವ ಹಕ್ಕು ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತ-ಸಂಬಂಧ ಇಲ್ಲದಿದ್ದರೂ ಸಹ ಒಂದನೇ ಪ್ರತಿವಾದಿಗೆ ಆಗದವರ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಿ ಎಂ ಸಿ, ವಕೀಲರು ಸಮಯ ಕೋರಿದ್ದು, ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ